**ಸಾಕ್ಷಿಯನ್ನು ದಿನಾಂಕ 15.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಾನು ಜಮೀನಿನಲ್ಲಿ ವ್ಯವಸಾಯ ಮಾಡುತ್ತೇನೆ. ನನ್ನ ತಂದೆ ಮುಂಚೆ ಡಾಕ್ಯುಮೆಂಟರಿ ಕೆಲಸವನ್ನು ಮಾಡುತ್ತಿದ್ದರು. ಈಗ ಮನೆಯಲ್ಲಿ ಇದ್ದಾರೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು.- ಸುಬ್ಬಲಕ್ಷ್ಮಿ ಮತ್ತು ಹೇಮಾವತಿ. ಪಿರ್ಯಾದಿಯು ನನ್ನ ಮಲತಾಯಿ ಎಂದರೆ ಹೌದು. ***2015***ರಿಂದ ನನ್ನ ತಂದೆ ಮತ್ತು ಆರೋಪಿಯ ನಡುವೆ ಆಗಿರುವಂತಹ ವ್ಯವಹರಾರಗಳು ಮತ್ತು ಜಮೀನುಗಳನ್ನು ಖರೀದಿ ಮಾಡಿರುವ ಬಗ್ಗೆ ನನಗೆ ಮನವರಿಕೆ ಇಲ್ಲ. ನಮ್ಮ ತಾಯಿ ಸುಬ್ಬಲಕ್ಷ್ಮಿ ಅವರು ಆರೋಪಿಯ ದೊಡ್ಡಪ್ಪನ ಮಗಳು ಎಂದರೆ ಹೌದು. ಆರೋಪಿಯ ಹಣಕಾಸಿನ ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ ಎಂದರೆ ಇರಬಹುದು. ಆರೋಪಿಯ ಹಣಕಾಸಿನ ಸ್ಥಿತಿ ಚೆನ್ನಾಗಿದ್ದ ಕಾರಣ ಆರೋಪಿ ಮತ್ತು ನಮ್ಮ ತಂದೆ ಅವರು ದೊಡ್ಡಬಳ್ಳಾಪುರದ ಕಡೆ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

***5.*** ಆರೋಪಿ ಮತ್ತು ನನ್ನ ತಂದೆ ಒಬ್ಬರಿಗೊಬ್ಬರು ಹಣವನ್ನು ಬ್ಯಾಂಕಿಗೆ ವರ್ಗಾಯಿಸಿಕೊಳ್ಳುವುದು ಮತ್ತು ಅದನ್ನು ಅಡ್ವಾನ್ಸ್ ಆಗಿ ನೀಡುವುದನ್ನು ಮಾಡಿಕೊಳ್ಳುತ್ತಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸಂದರ್ಭದಲ್ಲಿ ನನ್ನ ತಾಯಿಯಾದ ಸುಬ್ಬಲಕ್ಷ್ಮಿ ಮತ್ತು ಪಿರ್ಯಾದಿಯ ಖಾತೆಗಳಿಂದ ಆರೋಪಿಯ ಖಾತೆಗೆ ಹಣ ವರ್ಗಾವಣೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಹಾಗೆಯೇ ಆರೋಪಿಯ ಖಾತೆಯಿಂದ ನನ್ನ ತಾಯಿಯ ಮತ್ತು ಪಿರ್ಯಾದಿಯ ಖಾತೆಗೆ ಹಣ ವರ್ಗಾವಣೆ ಆಗಿರುವ ಬಗ್ಗೆ ದಾಖಲೆಗಳು ಇವೆ ಎಂದರೆ ಗೊತ್ತಿಲ್ಲ. ನಮ್ಮ ತಂದೆ ಆರೋಪಿ ಮತ್ತು ಪಿರ್ಯಾದಿಯ ಪಾಲುದಾರಿಕೆಯಲ್ಲಿಯೇ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತಿದ್ದರು ಎಂದರೆ ಸುಳ್ಳು.

***6.*** ಸಾಕ್ಷಿಗೆ ಒಂದು ಕ್ರಯಪತ್ರವನ್ನು ತೋರಿಸಿ ದೊಡ್ಡಬಳ್ಳಾಪುರ ತಾಲ್ಲೂಕು, ಬಿಟಿ ಗೆರೆ ಅಗ್ರಹಾರ ಗ್ರಾಮದ ಸರ್ವೇ ನಂ.***74/2*** ರಲ್ಲಿ ***2***ಎಕರೆ ***6***ಗುಂಟೆ ಕೃಷಿ ಜಮೀನನ್ನು ನಮ್ಮ ತಾಯಿ ಹೆಸರಿಗೆ ಆರೋಪಿಯ ಸಮಕ್ಷಮದಲ್ಲಿಯೇ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಕ್ರಯ ಆಗಿರುವುದು ನಿಜ ಆದರೆ ಆರೋಪಿಯ ಸಮಕ್ಷಮದಲ್ಲಿ ಆಗಿದೆಯೋ ಇಲ್ಲವೋ ನನಗೆ ಗೊಡ್ತಿಲ್ಲ. ಕ್ರಯಪತ್ರವನ್ನು

ಒಪ್ಪಿ ಕೊಂಡ ಕಾರಣ ಇದನ್ನು ಅಭಿಮುಖವಾಗಿ ನಿ.ಡಿ.*1* ಎಂದು ಗುರುತಿಸಲಾಯಿತು. ನಿ.ಡಿ.*1*ರಲ್ಲಿ ಆರೋಪಿಯು ಸಹ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸದರಿ ಆರೋಪಿಯ ಸಹಿಯನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ಕ್ರಯ ಪತ್ರ ಆಗುವ ಕಾಲಕ್ಕೆ ನಮ್ಮ ತಂದೆ ಮತ್ತು ಆರೋಪಿಯ ಭಾವ ಬಾಮೈದನಾಗಿ ಎಲ್ಲಾ ವ್ಯವಹಾರಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

*7.* ಸದರಿ ಸಂದರ್ಭದಲ್ಲಿ ಆರೋಪಿಯ ಕೆಲವೊಂದು ದಾಖಲೆಗಳು ನಮ್ಮ ತಂದೆಯ ಬಳಿಯೇ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂದರ್ಭದಲ್ಲಿ ಆರೋಪಿಯ ನಾಲ್ಕು ಚೆಕ್ ಗಳು ನಮ್ಮ ತಂದೆಯೇ ಬಳಿ ಉಳಿದುಕೊಂಡಿತ್ತು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ದಾಖಲೆಗಳು ಸಹ ಆರೋಪಿಯ ಕಡೆಯೇ ಕೆಲವೊಂದು ದಾಖಲೆಗಳು ಉಳಿದುಕೊಂಡಿವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಸೇರಿದಂತಹ ಸಿಟಿ ಯುನಿಯನ ಬ್ಯಾಂಕ್ ಚೆಕ್ ನಂ***000004, 000092, 000093*** ಮತ್ತು ***000094*** ನಮ್ಮ ತಂದೆಯೇ ಕಡಯೇ ಉಳಿದುಕೊಂಡಿತ್ತು ಎಂದರೆ ಗೊತ್ತಿಲ್ಲ.

***8.*** ರಾಕೇಶ್ ನನ್ನ ಸ್ನೇಹಿತ ಎಂದರೆ ಗೊತ್ತಿಲ್ಲ. ಗೋವಿಂದಪ್ಪರವರ ಮಗ ರಾಕೇಶ್ ಜಿ. ರಾಜಿ ಹೊಸಹಳ್ಳಿ ನನಗೆ ತುಂಬಾ ಆತ್ಮೀಯರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಲತಾಯಿಯಾದಂತಹ ಪಿರ್ಯಾದಿಯು ನನ್ನ ತಂದೆ ಬಳಿ ಇದ್ದಂತಹ ಆರೋಪಿಯ ನಾಲ್ಕು ಚೆಕ್ ಗಳ ಪೈಕಿ ಒಂದು ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ಹಾಕಿದ್ದಾರೆ ಎಂದರೆ ಸುಳ್ಳು. ನನ್ನ ತಾಯಿ ನನ್ನೊಂದಿಗೆ ಇದ್ದಾರೆ. ನನ್ನ ತಂದೆ ನಮ್ಮೊಂದಿಗೆ ಇಲ್ಲ. ನಾನು, ರಾಕೇಶ್ ಮತ್ತು ನನ್ನ ಮಲತಾಯಿಯಾದ ಪಿರ್ಯೂದಿ ಮೂರು ಜನ ಒಟ್ಟಾಗಿ ನನ್ನ ತಂದ ಬಳಿ ಇದ್ದಂತಹ ಆರೋಪಿಯ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಒಂದರೆ ನಂತರ ಒಂದು ಪ್ರಕರಣವನ್ನು ಹಾಕಿದ್ದೇವೆ ಎಂದರೆ ಸುಳ್ಳು. ರಾಕೇಶ್ ಕೈಯಿಂದ ಸಹ ಒಂದು ಚೆಕ್ ಅನ್ನು ಕೊಟ್ಟು ವಕೀಲರ ಕಡೆಯಿಂದ ನೋಟೀಸನ್ನು ಆರೋಪಿಗೆ ಕೊಡಿಸಿದ್ದೇವೆ ಎಂದರೆ ನೆನಪಿಲ್ಲ. ಸದರಿ ನೋಟೀಸು ಬಂದ ನಂತರ ಆರೋಪಿಯು ದೊಡ್ಡಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ರಾಕೇಶ್ ಮತ್ತು ಇತರರ ಮೇಲೆ ದೂರನ್ನು ಕೊಟ್ಟಿದ್ದೆ ಎಂದರೆ ನನಗೆ ರಾಕೇಶ್ ಯಾರು ಎಂದು ಗೊತಿಲ್ಲ ಎಂದು ನುಡಿದಿರುತ್ತಾರೆ.

***9.*** ಈ ಪ್ರಕರಣವನ್ನು ಪಿರ್ಯಾದಿ ಸಲ್ಲಿಸುವಾಗ ನನಗೆ ಸಂಪೂರ್ಣ ಮಾಹಿತಿ ಇರಲಿಲ್ಲ ಎಂದರೆ ಸುಳ್ಳು. ನಮ್ಮ ಚಿಕ್ಕಮ್ಮ ಮತ್ತು ನಾನು ಆರೋಪಿಗೆ ನಿ.ಪಿ.*4* ನೋಟೀಸನ್ನು ಕಳಿಸಿರುವುದು ಕಟ್ಟುಕತೆ ಎಂದರೆ ಸುಳ್ಳು. ಆರೋಪಿಯ ಹಣಕಾಸಿನ ಆರ್ಥಿಕ ಸ್ಥಿತಿ ಚೆನ್ನಾಗಿರುವ ಕಾರಣ ಎಂದೂ ನಮ್ಮ ಚಿಕ್ಕಮ್ಮನ ಬಳಿ ಹಣವನ್ನು ಎಂದೂ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ ಆದಾಯ ತೆರಿಗೆ ಪಾವತಿ ಮಾಡುತ್ತಾರೆ. ಸದರಿ ಐಟಿಆರ್ ಅನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

**<u>ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
ಬೆಂಗಳೂರು.